ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ.

709 (1157) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಿಂದ ಸರ್ಕಾರ ಉತ್ಪಾದನೆ ಮಾಡಲು ಉದ್ದೇಶಿಸಿದ ವಿದ್ಯುತ್‌ನ ಪ್ರಮಾಣವೆಷ್ಟು; (ಸ್ಥಾವನವಾರು)

ಆ) ಇಲ್ಲಿಯವರೆಗೆ ಉತ್ಪಾದಿಸಲಾದ ವಿದ್ಯುತ್ ಪ್ರಮಾಣವೆಷ್ಟು; (ಸ್ಥಾವರವಾರು)

ಇ) ಉಳಿದ ವಿದ್ಯುತ್ ಉತ್ಪಾದಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಕಳೆದ ಮೂರು ವರ್ಷಗಳಿಂದ ಉತ್ಪಾದಿಸಲು ಉದ್ದೇಶಿಸಿದ ವಿದ್ಯುತ್ತಿನ ಸ್ಥಾವರವಾರು ವಿವರ ಕೆಳಕಂಡಂತಿದೆ.

ದಶಲಕ್ಷ ಯೂನಿಟ್ಸುಗಳು

ಕ್ರ. ಸಂ.	ಸ್ಥಾವರ	1995-96	1996-97	1997-98
1.	ಶಿವನಸಮುದ್ರ	91	91	99
2.	ಶಿಂಷಾ	96	96	96
3.	ಮುನಿರಾಬಾದ್	93	74	72
4.	ಟಿ.ಬಿ.ಡ್ಯಾಂ	93	36	31
5.	ಎಂ.ಜಿ.ಹೆಚ್.ಇ ಜೋಗ್	366	137	130
6.	ಯಲಹಂಕ ಡೀಸಲ್ ವಿದ್ಯುತ್ ಉತ್ಪಾದನಾ ಘಟಕ	366	641	616
7.	ಶರಾವತಿ	4590	4500	5000
8.	ನಗಾರ್ಜುರಿ	2865	2610	2200
9.	ವರಾಹಿ	1060	1000	850
10.	ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ	5200	5200	5600
11.	ಇತರೆ ಜಲ ವಿದ್ಯುತ್	1014	949	1094
	ಒಟ್ಟು	**15,780**	**15,334**	**15,788**

ಆ) ಕಳೆದ ಮೂರು ವರ್ಷಗಳಲ್ಲಿ ಹಾಗೂ ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆಗೆ ಉತ್ಪಾದಿಸಲಾದ ಸ್ಥಾವರವಾರು ವಿದ್ಯುತ್ ವಿವರ ಕೆಳಕಂಡಂತಿದೆ

ದಶಲಕ್ಷ ಯೂನಿಟ್ಟುಗಳು

ಕ್ರ. ಸಂ.	ಸ್ಥಾವರ	1995-96	96-97	97-98	98-99 (28-8-99ರಂತೆ)
1.	ಶಿವನಸಮುದ್ರ	131	99	111	104
2.	ಶಿಂಷಾ	94	93	87	83
3.	ಮುನಿರಾಬಾದ್	77	70	92	97
4.	ಟಿ.ಬಿ.ಡ್ಯಾಂ	31	34	36	36
5.	ಜೋಗ್	315	133	143	144
6.	ಯಲಹಂಕ ಡಿ.ಜಿ. ವಿದ್ಯುತ್‌ಕೇಂದ್ರ	543	537	665	564
7.	ಶರಾವತಿ	4376	3528	5303	4640
8.	ನಾಗಝರಿ	3148	1884	2777	2011
9.	ವರಾಹಿ	1111	785	1224	1004
10.	ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ	4722	5152	5538	5416
11.	ಇತರೆ ಜಲ ವಿದ್ಯುತ್	865	542	1045	1123
	ಒಟ್ಟು	**15,449**	**12,857**	**17,201**	**15,231**

ಇ) ಪ್ರತಿಯೊಂದು ಸ್ಥಾವರಕ್ಕೂ ಅದರ ಸ್ಥಾಪಿತಸಾಮರ್ಥ್ಯದ ಆಧಾರದ ಮೇಲೆ ಉತ್ಪಾದನಾ ಗುರಿಯನ್ನು ನಿಗಧಪಡಿಸಲಾಗಿದ್ದರೂ, ಹಲವಾರು ತಾಂತ್ರಿಕ ಹಾಗೂ ನೈಸರ್ಗಿಕ ಕಾರಣಗಳಿಂದ ಉದ್ದೇಶಿತ ಗುರಿಸಾಧಿಸಲು ಸಾಧ್ಯವಾಗುವುದಿಲ್ಲ. ರಾಜ್ಯದಲ್ಲಿ ಹೆಚ್ಚಿನ ವಿದ್ಯುತ್ ಉತ್ಪಾದನೆಯು ಜಲ ವಿದ್ಯುತ್ ಯೋಜನೆಗಳಿಂದ ಉತ್ಪಾದಿಸಲಾಗುತ್ತಿದ್ದು, ಜಲಾಶಯದಲ್ಲಿ ನೀರಿನ ಮಟ್ಟವನ್ನು ಅನುಸರಿಸಿ, ವಿದ್ಯುತ್ ಉತ್ಪಾದನೆಯಾಗಿ, ಒಟ್ಟಾರೆ ನಿಗಧಿತಗುರಿ ಸಾಧನೆಯಲ್ಲಿ ಕೊರತೆಯಾಗುತ್ತದೆ. ಆದ್ದರಿಂದ, ಪ್ರತಿಯೊಂದು ಸ್ಥಾವರದಲ್ಲಿಯೂ ಉತ್ಪಾದನೆ ಕೊರತೆಯನ್ನು ನೀಗಿಸುವುದು ಕಷ್ಟಸಾಧ್ಯ. ತಾಂತ್ರಿಕ ಕಾರಣಗಳಿಂದ ವಿದ್ಯುತ್ ಉತ್ಪಾದನೆಯ ಕೊರತೆಯಾಗುವುದನ್ನು ಯಂತ್ರಗಳ ಉತ್ತಮ ನಿರ್ವಹಣೆಯಿಂದ ನಿಯಂತ್ರಿಸಬಹುದೇ ಹೊರತು; ಮಿಕ್ಕಂತೆ ಸ್ಥಾವರದ ಉತ್ಪಾದನೆಯ ಕೊರತೆಯನ್ನು ನಂತರ ಆ ವರ್ಷದಲ್ಲಿ ಸರಿದೂಗಿಸುವ ಸಾಧ್ಯತೆ ಇಲ್ಲ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಹಲವಾರು ಕ್ರಮ ಕೈಗೊಳ್ಳಲಾಗಿದೆ. ಅವುಗಳಲ್ಲಿ ಮುಖ್ಯವೆಂದರೆ,

1. ಖಾಸಗೀ ರಂಗದವರಿಗೆ ವಿದ್ಯುತ್ ಉತ್ಪಾದನೆಯಲ್ಲಿ ಭಾಗವಹಿಸಲು ಅನುಮತಿಸುವುದು.

2. ಕರ್ನಾಟಕ ವಿದ್ಯುತ್ ನಿಗಮದ ಮೂಲಕ ಹೊಸ ಹೊಸ ದೊಡ್ಡ ಯೋಜನೆಗಳನ್ನು ಕೈಗೊಳ್ಳುವುದು.

3. ಅಸಾಂಪ್ರಾದಾಯಿಕ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು ಪ್ರೋತ್ಸಾಹಿಸುವುದು.

ಅಬಕಾರಿ ಇಲಾಖೆಯಿಂದ ಸರ್ಕಾರಕ್ಕೆ ಆದಾಯ

710 (1158) ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1998-99ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ ಎಷ್ಟು ಆದಾಯ ಸಂಗ್ರಹಿಸಲು ಸರ್ಕಾರ ಉದ್ದೇಶಿಸಿತ್ತು?

ಆ) ಫೆಬ್ರವರಿ ಅಂತ್ಯದವರೆಗೆ ಸಂಗ್ರಹಿಸಲಾದ ಆದಾಯ ಎಷ್ಟು?

ಇ) ಉಳಿದ ಹಣವನ್ನು ಮಾರ್ಚ್ ಅಂತ್ಯದೊಳಗೆ ವಸೂಲಿ ಮಾಡಲು ಕೈಗೊಂಡ ಕ್ರಮಗಳೇನು?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :

ಅ) ರೂ. 1050 ಕೋಟಿಗಳು.

ಆ) ರೂ. 849.54 ಕೋಟಿಗಳು (ಅಂದಾಜು)

ಇ) ಉಳಿದ ಹಣವನ್ನು ಮಾರ್ಚ್ ತಿಂಗಳಲ್ಲಿ ವಸೂಲಿ ಮಾಡಲು ಎಲ್ಲಾ ಅಬಕಾರಿ ಜಂಟಿ: ಉಪ ಆಯುಕ್ತರುಗಳ ಸಭೆ ಕರೆದು ಒಂದು ನಿರ್ಧಿಷ್ಟ ಗುರಿಯನ್ನು ನಿಗದಿಪಡಿಸಿದೆ. ಪ್ರತಿ ದಿನದ ಸಂಗ್ರಹಣೆಯ ಪ್ರಗತಿಯನ್ನು ಪರಿವೀಕ್ಷಿಸಲಾಗುತ್ತಿದೆ.

ಕೃಷ್ಣ ಮೇಲ್ದಂಡೆ ಯೋಜನೆ ಕುರಿತು.

711 (1159) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಕೃಷ್ಣಾ ಮೇಲ್ದಂಡೆ ಯೋಜನೆಗೆ ಸರ್ಕಾರ ಇಲ್ಲಿಯವರೆಗೆ ಖರ್ಚು ಮಾಡಿದ ಒಟ್ಟು ಹಣವೆಷ್ಟು.

2) ಅದರ ಕಾಮಗಾರಿಗಳು ಈಗ ಯಾವ ಯಾವ ಹಂತದಲ್ಲಿವೆ.

3) 2000ನೇ ಇಸವಿಯೊಳಗೆ ಈ ರಾಜ್ಯದ ಪಾಲಿನ ನೀರನ್ನು ಉಪಯೋಗಿಸಿಕೊಳ್ಳಬೇಕಾಗಿರುವುದರಿಂದ ತ್ವರಿತ ಗತಿಯಲ್ಲಿ ಕಾಮಗಾರಿಯನ್ನು ಪೂರೈಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎನ್.ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

1) ಕೃಷ್ಣಾ ಮೇಲ್ದಂಡೆ ಯೋಜನೆಗೆ ಸರ್ಕಾರವು ಜನವರಿ 1999ರವರೆಗೆ ರೂ. 402 1.92 ಕೋಟಿಗಳನ್ನು ಖರ್ಚು ಮಾಡಿದೆ.